ಕಷ್ಟವಾಗಿರುವಾಗ ಹಾಡುವುದೆಲ್ಲಿ? ಆದರೂ ದಾರಿಯಲ್ಲಿ ದೇವರ ಪಲ್ಲಕ್ಕಿ ಹೊರುವವರ ಹಿಂದೆ ಹಾಡುಗಾರರು ಇರುತ್ತಿದ್ದರು. ಹಿಮಾಲಯದ ಅಲೆಮಾರಿ ಸನ್ಯಾಸಿಗಳು ಮತ್ತು ಭಿಕ್ಷುಕರು ಒಳ್ಳೆಯ ಹಾಡುಗಾರರು. ಊಂಕಿ ಎಂಬಲ್ಲಿರುವ ಕೇದಾರಮಠದ ಪ್ರಾಂಗಣದಲ್ಲಿ, ಮೂವರು ಕಲಾವಿದರು ಪುಂಗಿ ಊದುತ್ತ ಚರ್ಮವಾದ್ಯ ಬಾರಿಸುತ್ತ ಅದ್ಭುತವಾದ ಸಂಗೀತ ಪ್ರದರ್ಶನ ಕೊಟ್ಟರು. ಹಿಮಾಲಯದಲ್ಲಿ ಸಾಮಾನ್ಯವಾಗಿ ಬೇಸಿಗೆಯಲ್ಲಿ ಜಾತ್ರೆಗಳು ನೆರೆಯುತ್ತವೆ. ಅವಕ್ಕೆ ಸ್ಥಳೀಯ ಗಾಯಕರು ಬರುತ್ತಾರೆ. ಉತ್ತರಕಾಶಿ ಸೀಮೆಯ ಹಳ್ಳಿಗರು ವಿಶಾಲ ಬಯಲಿನಲ್ಲಿ ಸೇರುತ್ತಾರಂತೆ. ದೂರದೂರ ಮನೆಗಳಲ್ಲಿ ಏಕಾಂಗಿಯಾಗಿ ವಾಸಿಸುವ ಅವರಿಗೆ ಜಾತ್ರೆ ಗದ್ದಲ ಹಾಡು ಬಿಡುಗಡೆ ಅನುಭವ ಕೊಡುತ್ತಿರಬೇಕು.

ಚಾರಣದಲ್ಲಿ ನಮಗೆ ವಿಶೇಷ ಖುಷಿ ಕೊಟ್ಟಿದ್ದು ಭೂತಾನಿ ಹಾಡುಗಾರರು. ಪಾರೊ ನಗರದಲ್ಲಿ ಧನುರ್ವಿದ್ಯೆ ಕಲಿಯುವವರು, ತಮ್ಮ ಬಾಣವು ಗುರಿಯನ್ನು ಮುಟ್ಟಿದಾಗ, ಹಾಡುತ್ತ ಕುಣಿಯುತ್ತಾರೆ. ಒಂದು ದಿನ ಪುನಾಕ ಎಂಬಲ್ಲಿರುವ ಪ್ರಸಿದ್ಧ ವಿಹಾರ ನೋಡಲು ಹೊರಟಿದ್ದೆವು. ನಡುವೆ ಸಣ್ಣದೊಂದು ಊರಲ್ಲಿ ಚಹಾ ಕುಡಿಯಲು ವಾಹನ ನಿಲ್ಲಿಸಿದೆವು. ಚಹಾ ಕುಡಿಯುವಾಗ ಊರೊಳಗಿಂದ ಮಹಿಳೆಯರ ಹಾಡಿಕೆ ಕೇಳಿಸಿತು. ಕೂಡಲೇ ಧಾವಿಸಿದೆವು. ಅಲ್ಲಿ ವಿಹಾರ ಕಟ್ಟುವ ಕಾರ್ಯ ನಡೆಯುತ್ತಿತ್ತು. ಸಿಖ್ಖರು ಗುರುದ್ವಾರದಲ್ಲಿ ಮಾಡುವಂತೆ, ಭೂತಾನಿ ಉಪಾಸಕರು ಕರಸೇವೆ ಮಾಡುತ್ತಿದ್ದರು. ತಮ್ಮ ಉಡುಪನ್ನು ತುಸು ಮೇಲಕ್ಕೆ ಕಟ್ಟಿಕೊಂಡಿದ್ದ ಬಿಳಿಯ ಪಾದಗಳ ಚೆಲುವಾದ ಹೆಂಗಸರು, ಗೋಡೆಗೆ ಬೇಕಾದ ಕಪ್ಪನೆಯ ಹಸಿಮಣ್ಣನ್ನು ತುಳಿಯುತ್ತ ಹಾಡುತ್ತಿದ್ದರು. ಅವರ ಹಾಡು ಅರ್ಥವಾಗಲಿಲ್ಲ. ಆದರೆ ಪ್ರತಿ ಚರಣದ ತುದಿಗೆ ಬರುತ್ತಿದ್ದ ‘ಓಂ ಮಣಿ ಪದ್ಮಯೇ’ ಎಂಬ ಪಲ್ಲವಿಯನ್ನು ಗುರುತು ಹಿಡಿದೆವು. ಹಿಮಾಲಯದ ನಾಡಿನ ಮದುವೆಗಳಲ್ಲಿ ಹಾಡು ಅಲ್ಲಿನ ನದಿಗಳಂತೆ ಭೋರ್ಗರೆಯುತ್ತವೆ. ಅಲ್ಲಿ ಬೇಸರ ಕಳೆಯಲು ಮಾತ್ರವಲ್ಲ, ದುಡಿಮೆಯ ಶ್ರಮ ಕಳೆಯಲು ಹಾಡು ಒಂದು ಮಾಧ್ಯಮ. ಕುಣಿತ ಮತ್ತು ಹಾಡುಗಳು ಇಲ್ಲಿನ ಬದುಕಿನ ಶ್ವಾಸಕೋಶಗಳು. ಹಾಡಿನ ಬೀಡುಗಳಂತೆ ತೋರುವ ಭೂತಾನ ಹಿಮಾಚಲ ಪ್ರದೇಶ ಲಡಾಕುಗಳಲ್ಲಿ, ಭಾಷೆ ಬೇರೆಯಾದರೂ ಅವುಗಳ ಲಯ ಧಾಟಿ ಒಂದೇ ಅನಿಸುತ್ತದೆ.


ಕುರಿಗಾಹಿ ಹಾಗೂ ವೇಣುವಾದಕ

ಚಾರಣವು ನಮಗರಿಯದ ಸಂಗತಿಗಳ ಬಗ್ಗೆ ವಿಭಿನ್ನವಾಗಿ ಚಿಂತಿಸಲು ಪ್ರೇರೇಪಿಸುತ್ತದೆ. ಒಳಗಿನ ನೆನಪುಗಳಿಗೆ ಹೊಸ ಆಕಾರ ಕೊಟ್ಟು ಹೊಮ್ಮಿಸುತ್ತದೆ. ಚಾರಣಿಗರ ಪ್ರತಿಭೆ ಕಸುವು ಸಾಹಸಗಳು, ಅನಿರೀಕ್ಷಿತವಾಗಿ ಎರಗುವ ಬಿಕ್ಕಟ್ಟುಗಳಲ್ಲಿ ಪ್ರಕಟವಾಗುತ್ತವೆ. ಒಮ್ಮೆ ಬದರಿನಾಥ್ ಹಾದಿಯಲ್ಲಿರುವಾಗ ಭೂಕುಸಿತದಿಂದ ನಮ್ಮ ವಾಹನ ಐದಾರು ಗಂಟೆ ರಸ್ತೆಯಲ್ಲೇ ಕೆಟ್ಟ ಹಡಗಿನಂತೆ ನಿಲ್ಲಬೇಕಾಯಿತು. ಅದು ಮಾತೆಲ್ಲ ಖಾಲಿಯಾಗಿ ಅಥವಾ ಬೇಡವಾಗಿ ದಿಕ್ಕೆಟ್ಟ ಬೇಸರದ ಅವಸ್ಥೆ. ದೂರದಲ್ಲಿ, ನಮ್ಮ ವಾಹನದ ಎದುರಿದ್ದ ದೊಡ್ಡ ಪರ್ವತದಿಂದ ಬೀಳುವ ಜಲಪಾತ ಕಾಣುತ್ತಿತ್ತು. ಜತೆಗೆ ಮಳೆಯೂ ಸುರಿಯುತ್ತಿತ್ತು. ನಮ್ಮ ತಂಡದಲ್ಲಿದ್ದ ಯಾರೊ ಒಬ್ಬರು, ತಟ್ಟನೆ ‘ಇಳಿದು ಬಾ ತಾಯಿ’ ಹಾಡಲು ಶುರು ಮಾಡಿದರು. ಆ ಹೊತ್ತಿನ ಬೇಸರದಲ್ಲಿ, ಆ ಧಬಧಬೆಯ ದೃಶ್ಯದ ಸಮ್ಮುಖದಲ್ಲಿ, ಬೇಂದ್ರೆಯವರ ಆ ಕವನಕ್ಕೆ ವಿಶೇಷವಾದ ಸಾಂತ್ವನ ಶಕ್ತಿಯಿದ್ದಂತೆ ತೋರಿತು. ಬೇಂದ್ರೆ ಹಿಮಾಲಯ ಕಂಡಿದ್ದರೊ ಇಲ್ಲವೊ? ಆದರೆ ಹಿಮನದಿಯಾದ ಗಂಗೆಯನ್ನು ಕುರಿತ ಅವರ ಕವನ ಎಂದೂ ಅಷ್ಟೊಂದು ಅರ್ಥಭರಿತವಾಗಿ ಕೇಳಿಸಿರಲಿಲ್ಲ. ರಸ್ತೆ ಯಾವಾಗಲಾದರೂ ಕ್ಲಿಯರ್ ಆಗಲಿ ಎಂದು, ತಂಡದಲ್ಲಿದ್ದ ಎಲ್ಲರೂ ತಮಗೆ ಗೊತ್ತಿರುವ ಕನ್ನಡ ಹಿಂದಿ ಹಾಡುಗಳನ್ನು ಹಾಡತೊಡಗಿದರು. ಹಾಡಿಗೆ ತನಗೆ ತಾನೇ ಮಾಧುರ್ಯ ಇರುವುದಿಲ್ಲ. ಅದನ್ನು ನಾವು ಯಾವ ಸ್ಥಳದಲ್ಲಿ ಮತ್ತು ಮನಸ್ಥಿತಿಯಲ್ಲಿ ಆಲಿಸುತ್ತೇವೆ ಎನ್ನುವುದರಿಂದ ಮಾಧುರ್ಯವೂ ಅರ್ಥವೂ ಪ್ರಾಪ್ತವಾಗುತ್ತದೆ.

